## Anicut to Yagachi River

42. Sri K. P. CHIKKE GOWDA (Sakaleshpur).—

Will the Minister for Public Works be pleased to state :—

(*a*) when the Government is taking up the construction of an Anicut to the River Yagachi;

(*b*) the amount of estimate sanctioned ;

(*c*) the extent of lands proposed to be benefited ?

*A*.—Sri VEERENDRA PATIL (Minister for Public Works).—

(*a*) On receipt of technical clearance from Central Water and Power Commission, Government of India and as soon as the financial stringency eases.

(*b*) Does not arise in view of reply to (*a*).

(*c*) 57,000 acres.

ಶ್ರೀ ಕೆ. ಪಿ. ಚಿಕ್ಕೇಗೌಡ.—ಸ್ವಾಮಿ, ತಮ್ಮ ಉತ್ತರದಲ್ಲಿ 57,000 ಏಕರೆಗಳು ಸಾಗುವಳಿಗೆ ಬರುತ್ತದೆಂದು ಹೇಳಿದ್ದೀರಿ, ಯಾವ ಯಾವ ಜಿಲ್ಲೆಯಲ್ಲಿ, ಯಾವ ಯಾವ ತಾಲ್ಲೂಕ್‌ಗಳಲ್ಲಿ ಎಷ್ಟೆಷ್ಟು ಎಕರೆ ಸಾಗುವಳಿಗೆ ಬರುತ್ತದೆ ಎಂಬುದನ್ನು ಹೇಳುತ್ತೀರಾ ?

†ಶ್ರೀ ವೀರೇಂದ್ರ ಪಾಟೀಲ್.—32 ಸಾವಿರ ಎಕರೆ ಹಾಸನ ಜಿಲ್ಲೆಯಲ್ಲಿ, 25 ಸಾವಿರ ಎಕರೆ ಚಿತ್ರದುರ್ಗ ಜಿಲ್ಲೆಯಲ್ಲಿ ಸಾಗುವಳಿಗೆ ಬರುತ್ತದೆ.

ಶ್ರೀ ಎಚ್. ಬಿ. ಜ್ಯಾವನಯ್ಯ.—ಸ್ವಾಮಿ, ಭಾರತ ಸರ್ಕಾರದ ಕೇಂದ್ರ ಜಲ-ವಿದ್ಯುತ್ ಆಯೋಗದವರಿಂದ ತಾಂತ್ರಿಕ ಮಂಜೂರಾತಿ ದೊರಕಿದನಂತರ ಮತ್ತು ಹಣದ ಮುಗಟ್ಟು ತೀರಿದ ಬಳಿಕ ಅದರ ನಿರ್ಮಾಣವನ್ನು ಕೈಕೊಳ್ಳಲಾಗುವುದು ಎಂದು ಹೇಳಿದ್ದೀರಿ, ಇದೇ ರೀತಿ ಇಡೀ ಕರ್ನಾಟಕದ ಎಲ್ಲಾ ಯೋಜನೆಗಳಿಗೂ ಅನ್ವಯಿಸುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿಯವರೆಗೂ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೊಸದಾಗಿ ಯಾವ ಒಂದು ಮಧ್ಯಮ ಅಥವಾ ದೊಡ್ಡ ಪ್ರಮಾಣದ ಯೋಜನೆಗಳನ್ನೂ ತೆಗೆದುಕೊಂಡಿಲ್ಲ.

ಶ್ರೀ ಎಸ್. ಶಿವಪ್ಪ.—ಮಾನ್ಯ ಮಂತ್ರಿಗಳು ಹಾಸನ ಜಿಲ್ಲೆಯಲ್ಲಿ 32 ಸಾವಿರ ಎಕರೆಗಳು ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ 25 ಸಾವಿರ ಎಕರೆಗಳು ಸಾಗುವಳಿಗೆ ಬರುತ್ತದೆಂದು ಹೇಳಿದರು ; ಯಗಚೀ ನದಿ ಕಾವೇರಿ ಬೇಸಿನ್‌ನಲ್ಲಿ ಬರುತ್ತದೆ. ಆದ್ದರಿಂದ ಈ ನದಿಯ ನೀರನ್ನು ಚಿತ್ರದುರ್ಗ ಜಿಲ್ಲೆಗೆ ಯಾವ ರೀತಿ ತೆಗೆದುಕೊಂಡು ಹೋಗುವುದಕ್ಕಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಿದೆಯೆಂದು ತಿಳಿದು ಕೊಂಡು, ಈಗಾಗಲೇ ಇನ್‌ವೆಸ್ಟಿಗೇಷನ್ ಮಾಡಿ, ಪ್ಲಾನ್ ಅಂಡ್ ಎಸ್ಟಿಮೇಟ್ ತಯಾರು ಮಾಡಿ ಕೇಂದ್ರ ಸರ್ಕಾರದ ತಾಂತ್ರಿಕ ಮಂಜೂರಾತಿಗಾಗಿ ಕಳಿಸಿದ್ದೇವೆ. ಈ ಯೋಜನೆಯಿಂದ ಹಾಸನ ಜಿಲ್ಲೆಯ ಎಷ್ಟು ಎಕರೆ ಭೂಮಿಗೆ ನೀರಾವರಿಯಾಗಬಹುದು ಎಂಬುದನ್ನು ಲೆಕ್ಕಮಾಡಿ ಉಳಿದ ನೀರನ್ನು ಚಿತ್ರದುರ್ಗ ಜಿಲ್ಲೆಯ ವಾಣೀವಿಲಾಸ ಸಾಗರಕ್ಕೆ ತಿರುಗಿಸಬೇಕೆಂದು ಅಂದಾಜು ಮಾಡಲಾಗಿದೆ.

ಶ್ರೀ ಬಿ. ನಂಜಪ್ಪ.—ಸ್ವಾಮಿ, ತಮ್ಮ ಉತ್ತರದಲ್ಲಿ ಹಣದ ಮುಗ್ಗಟ್ಟು ತೀರಿದ ಬಳಿಕ ಅದರ ನಿರ್ಮಾಣವನ್ನು ಕೈಕೊಳ್ಳಲಾಗುವುದು ಎಂದು ಹೇಳಿದ್ದೀರಿ. ಅಂದರೆ ಹಣದ ಮುಗಟ್ಟು ಯಾವಾಗ ಬಗೆಹರಿಯುತ್ತದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಹಣಕಾಸಿನ ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಅನೇಕ ಸಲ ಹೇಳಿದ್ದೇನೆ. ಈಗಾಗಲೆ ಮೊದಲ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ಪ್ರಾರಂಭ ಮಾಡಿದಂತಹ ಕೆಲಸಕಾರ್ಯಗಳನ್ನು ಮುಗಿಸಬೇಕಾದರೆ 188 ಕೋಟಿ ರೂಪಾಯಿಗಳು ಖರ್ಚು

ಬರುತ್ತದೆ. ಇಂತಹ ಪರಿಸ್ಥಿತಿಯಿರುವುದರಿಂದ ಹೊಸದಾಗಿ ಯಾವ ತರಹದ ಮಧ್ಯಮ ಅಥವಾ ದೊಡ್ಡ ಪ್ರಮಾಣದ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಸಾಧ್ಯವಾದ ಮಟ್ಟಿಗೆ ಈ ಯೋಜನೆಯನ್ನು ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳಬೇಕೆಂದು 40 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಆದರೆ ಹಣದ ಪರಿಸ್ಥಿತಿ ಯಾವ ರೀತಿ ಇರುತ್ತದೆ ಎಂಬುದನ್ನು ನೋಡಿಕೊಂಡು ಮುಂದೆ ಈ ಯೋಜನೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಂತಹ ದಿನವನ, ಇಂತಹ ತಾರೀಖು, ಇಂತಹ ವರ್ಷದಲ್ಲಿಯೇ ತೆಗೆದುಕೊಳ್ಳುತ್ತೇವೆಂದು ಹೇಳುವ ಪರಿಸ್ಥಿತಿಯಲ್ಲಿ ಈಗ ನಾವಿಲ್ಲ.

Sri H. N. NANJE GOWDA.—The hon. Minister was pleased to state that 25,000 acres are to be irrigated in Chitradurga *i.e.*, Krishna basin. Is it not against the Cavery Riparian pact ?

Sri VEERENDRA PATIL.—That is why we have taken special care to see that the project site is located one mile up stream of Belur. Up to that limit the river is a non-scheduled river and it is not covered by the agreement. That is why to see that no other State Government takes any objection, we have provided a dam there and thereby we will be irrigating lands not only in Hassan but also in Chitradurga.

Sri H. N. NANJE GOWDA.—Though it is not a scheduled river, it is in the Cauvery basin. Is it not against the Cauvery Riparian Pact ?

Sri VEERENDRA PATIL.—No doubt, this river is in the Cauvery basin. But this river is not attracted by the agreement. Before 1974 we want to see that this work is taken up and committed. We want to do this not at the cost of the ryots living in the basin of this area but we want to satisfy the people of that area and want to take the surplus water to the Krishna basin.

## Government Dispensaries at Somwarpet

43. Sri G. M. MANJANATHAYA (Somwarpet).—

Will the Minister for Health and Housing be pleased to state:—

(*a*) whether Government is aware that the Government Dispensaries at Hebbale and Madapur in Somwarpet Taluk of Coorg District are not functioning properly for want of medical officers and staff like nurses, etc., during the last 3 years;

(*b*) the reasons for not posting the staff for such a long period ;

(*c*) whether Government would take action for posting of staff to the above dispensaries ?

*A.*—Sri K. PUTTASWAMY (Minister for Health and Housing).—

(*a*) No.

(*b*) & (*c*) Do not arise.